# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೨೭, ಮೇ, ೨೦೨೬ (ಜ್ಯೇಷ್ಠ, ೦೬, ಶಕವರ್ಷ, ೧೯೪೮)<br>BENGALURU, WEDNESDAY, 27, MAY, 2026 ( JYAISTHA , 06, SHAKAVARSHA, 1948) | ನಂ. ೪೦೩<br>No. 403 |


**ಕರ್ನಾಟಕ ಸರ್ಕಾರ**

ಸಂ: ಕಂಇ 117 ಬಿಎಸ್ಐ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ. ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:27.05.2026

## ಅಧಿಸೂಚನೆ

ಕರ್ನಾಟಕ ರಾಜ್ಯ ಕಂದಾಯ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳು 2026 ರ ಕರಡು ನಿಯಮಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ 3ನೇ ಪ್ರಕರಣದ 2(ಎ) ಉಪ ಪ್ರಕರಣವನ್ನು ಪ್ರಕರಣ 8 ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ, ದಿನಾಂಕ:18.03.2026ರ ಕರ್ನಾಟಕ ರಾಜ್ಯಪತ್ರದ ಸಂಪುಟ 161 ರ ಸಂಚಿಕೆ 55ರ ಭಾಗ 4ಎ ರಲ್ಲಿ ಅಧಿಸೂಚನೆ ಸಂಖ್ಯೆ: ಕಂಇ 117 ಬಿಎಸ್ಐ 2024 ದಿನಾಂಕ:16.03.2026 ರಲ್ಲಿ ಪ್ರಕಟಿಸಿ, ಅದರಿಂದ ಭಾದಿತರಾಗಬಹುದಾದಂತಹ ವ್ಯಕ್ತಿಗಳಿಂದ ಅಧಿಕೃತ ರಾಜ್ಯ ಪತ್ರದಲ್ಲಿ ಆ ಕರಡು ನಿಯಮಗಳು ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ,

ಸದರಿ ರಾಜ್ಯಪತ್ರವನ್ನು ದಿನಾಂಕ:18.03.2026ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿರುವುದರಿಂದ, ಮತ್ತು ಸ್ವೀಕೃತವಾಗಿರುವ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ,

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ 3ನೇ ಪ್ರಕರಣದ 1ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

1. **ಶೀರ್ಷಿಕೆ, ಪ್ರಾರಂಭ:-**

i. ಈ ನಿಯಮಗಳನ್ನು "ಕರ್ನಾಟಕ ರಾಜ್ಯ ಕಂದಾಯ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳು 2026" ಎಂದು ಕರೆಯತಕ್ಕದ್ದು,

ii. ಈ ನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನೇಮಕಾತಿ ವಿಧಾನ ಮತ್ತು ಕನಿಷ್ಟ ವಿದ್ಯಾರ್ಹತೆ:** ಕರ್ನಾಟಕ ರಾಜ್ಯ ಕಂದಾಯ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳು, 2026ರ ಈ ಕೆಳಗಿನ ಅನುಸೂಚಿಯಲ್ಲಿನ ಅಂಕಣ (2) ಮತ್ತು (3) ರಲ್ಲಿ ನಮೂದಿಸಿರುವ ವಿವಿಧ ವರ್ಗಗಳ ಹುದ್ದೆಗಳು, ವೇತನ ಶ್ರೇಣಿಗಳು ಮತ್ತು ಒಟ್ಟು ಸಂಖ್ಯಾ ಬಲದ ಹುದ್ದೆಗಳನ್ನು ಒಳಗೊಂಡಿದ್ದು, ಒಟ್ಟು ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯನ್ನು ಅನುಕ್ರಮವಾಗಿ ಅದರ ಅಂಕಣ (4), (5), (6) ಮತ್ತು (7) ರಲ್ಲಿ ನಿರ್ದಿಷ್ಟಪಡಿಸಲಾಗಿದೆ.

3. **ನಿರಸನ ಮತ್ತು ಉಳಿಸುವಿಕೆಗಳು**: ಕರ್ನಾಟಕ ಸಾಮಾನ್ಯ ಸೇವೆಗಳು (ಕಂದಾಯ ಅಧೀನ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು 1977ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಅಂತಹ ನಿರಸನವು ಈ ಕೆಳಕಂಡ ಸಂದರ್ಭಗಳಲ್ಲಿ ಪರಿಣಾಮಗೊಳ್ಳತಕ್ಕದ್ದಲ್ಲ.

(ಅ) ಸದರಿ ನಿಯಮಗಳ ಪೂರ್ವ ಪ್ರವರ್ತನೆ ಅಥವಾ ಅದರ ಅಡಿಯಲ್ಲಿ ಕೈಗೊಂಡ ಸಮುಚಿತವಾದ ಕ್ರಮ ಅಥವಾ ಸಂರಸ್ಥಗೊಂಡ ಪ್ರಕರಣ;

ಅಥವಾ

(ಆ) ಸದರಿ ನಿಯಮಗಳ ಅಡಿಯಲ್ಲಿ ಅರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು ವಿಶೇಷ ಅಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ.

# ಅನುಸೂಚಿ

**(ಹುದ್ದೆಯ ವರ್ಗ, ವೇತನ ಶ್ರೇಣಿ, ಮಂಜೂರಾದ ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ)**

| ಕ್ರ. ಸಂ | ಹುದ್ದೆಯ ವರ್ಗ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ. | | | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|
| | | ಖಾಯಂ | ತಾತ್ಕಾಲಿಕ | ರಜಾ ಮೀಸಲಾತಿ | | |
| 1 | 2 | 3 | 4 | 5 | 6 | 7 |
| 1 | ಅಪರ ಮುಖ್ಯಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,<br>ಕಂದಾಯ ಇಲಾಖೆ.<br>(ಹೆಚ್‌ಎಜಿ/ಸೂಪರ್ ಟೈಂಸ್ಕೇಲ್) | 1 | - | - | ಭಾರತೀಯ ಆಡಳಿತ ಸೇವೆಯ ಅಧಿಕಾರಿ | - |
| 2 | ಆಯುಕ್ತರು.<br>(ಕಂದಾಯ, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ)<br>(ಸೂಪರ್ ಟೈಂಸ್ಕೇಲ್/ ಆಯ್ಕೆ ಶ್ರೇಣಿ) | 1 | - | - | ಭಾರತೀಯ ಆಡಳಿತ ಸೇವೆಯ ಅಧಿಕಾರಿ | - |
| 3 | ಪ್ರಾದೇಶಿಕ ಆಯುಕ್ತರು.<br>ಬೆಂಗಳೂರು/ಮೈಸೂರು/ ಬೆಳಗಾವಿ/<br>ಕಲಬುರಗಿ<br>(ಸೂಪರ್ ಟೈಂಸ್ಕೇಲ್/ ಆಯ್ಕೆ ಶ್ರೇಣಿ) | 4 | - | - | ಭಾರತೀಯ ಆಡಳಿತ ಸೇವೆಯ ಅಧಿಕಾರಿ | - |
| 4 | ನಿರ್ದೇಶಕರು.<br>ಎಜೆಎಸ್‌ಕೆ/ಡಿಎಸ್‌ಎಸ್‌ಪಿ<br>(ಜೂನಿಯರ್ ಅಡ್‌ಮಿನಿಸ್ಟ್ರೇಟೀವ್ ಗ್ರೇಡ್/ ಸೀನಿಯರ್ ಟೈಂಸ್ಕೇಲ್) | 2 | - | - | ಭಾರತೀಯ ಆಡಳಿತ ಸೇವೆಯ ಅಧಿಕಾರಿ | - |

| | | | | | | |
|---|---|---|---|---|---|---|
| 5 | ಜಿಲ್ಲಾಧಿಕಾರಿಗಳು.<br>(ಸೀನಿಯರ್ ಸ್ಕೇಲ್) | 31 | - | - | ಭಾರತೀಯ ಆಡಳಿತ ಸೇವೆಯ ಅಧಿಕಾರಿ | - |
| 6 | ವಿಶೇಷ ಜಿಲ್ಲಾಧಿಕಾರಿಗಳು.<br>(ಸೀನಿಯರ್ ಸ್ಕೇಲ್) | 3 | - | - | ಭಾರತೀಯ ಆಡಳಿತ ಸೇವೆಯ ಅಧಿಕಾರಿ | - |
| 7 | ಅಪರ ಕಂದಾಯ ಆಯುಕ್ತರು.<br>(ಆಯ್ಕೆ ಶ್ರೇಣಿ ಮತ್ತು ಮೇಲ್ಪಟ್ಟು) | 3 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಆಯ್ಕೆಶ್ರೇಣಿ ಮತ್ತು ಮೇಲ್ಪಟ್ಟು) | - |
| 8 | ಅಪರ ಪ್ರಾದೇಶಿಕ ಆಯುಕ್ತರು.<br>(ಆಯ್ಕೆ ಶ್ರೇಣಿ  ಮತ್ತು ಮೇಲ್ಪಟ್ಟು) | 05 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಆಯ್ಕೆ ಶ್ರೇಣಿ ಮತ್ತು ಮೇಲ್ಪಟ್ಟು) | - |
| 9 | ಅಪರ ಜಿಲ್ಲಾಧಿಕಾರಿ.<br>(ಹಿರಿಯ ಶ್ರೇಣಿ  ಮತ್ತು ಮೇಲ್ಪಟ್ಟು) | 31 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟು) | - |
| 10 | ವಿಶೇಷ ಜಿಲ್ಲಾಧಿಕಾರಿ.<br>ಆಯುಕ್ತರು,<br>(ಭೂಮಿ & ಎಂಎಲ್ಆರ್ / ಜಾರಿದಳ, ಅಭಿ ಯೋಜನೆ ಮತ್ತು ಕಾನೂನು ವಿಭಾಗ)<br>(ಹಿರಿಯ ಶ್ರೇಣಿ  ಮತ್ತು ಮೇಲ್ಪಟ್ಟು) | 03 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟು) | - |
| 11 | ಅಪರ / ಉಪ ನಿರ್ದೇಶಕರು.<br>ಎಜೆಎಸ್ಕೆ.,<br>(ಹಿರಿಯ ಶ್ರೇಣಿ  ಮತ್ತು ಮೇಲ್ಪಟ್ಟು) | 01 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟು) | |
| 12 | ಜಂಟಿ ನಿರ್ದೇಶಕರು – ಯುಪಿಓಆರ್<br>(ಹಿರಿಯ ಶ್ರೇಣಿ  ಮತ್ತು ಮೇಲ್ಪಟ್ಟು) | 01 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟು)<br>**ಅಥವಾ**<br>ಕರ್ನಾಟಕ ರಾಜ್ಯ ಭೂ ದಾಖಲೆಗಳು ಮತ್ತು ಭೂ ಮಾಪನ ಇಲಾಖೆಯಿಂದ ನಿಯೋಜನೆ | |

| | | | | | | |
|---|---|---|---|---|---|---|
| 13 | ನಿರ್ದೇಶಕರು.<br>ಕಂದಾಯ ಗ್ರಾಮಗಳ ರಚನಾ ಕೋಶ<br>(ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟು | 01 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟು) | |
| 14 | ಸಹಾಯಕ ಆಯುಕ್ತರು.<br>(ಕೆ.ಎ.ಎಸ್ ಕೇಡರ್‌ನ ಜೂನಿಯರ್ ಸ್ಕೇಲ್/ ಐಎಎಸ್ ಕೇಡರ್‌ನ ಜೂನಿಯರ್ ಸ್ಕೇಲ್) | 59 | - | - | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ<br>(ಕಿರಿಯ ಶ್ರೇಣಿ ಮತ್ತು ಮೇಲ್ಪಟ್ಟು) | |
| 15 | ಉಪ ನಿರ್ದೇಶಕರು.<br>ಯುಪಿಓಆರ್.<br>ರೂ. 83700-15520 | 01 | - | - | ಕರ್ನಾಟಕ ರಾಜ್ಯ ಭೂ ದಾಖಲೆಗಳು ಮತ್ತು ಭೂ ಮಾಪನ ಇಲಾಖೆಯಿಂದ ನಿಯೋಜನೆ | |
| 16 | ತಹಸೀಲ್ದಾರ್ ಗ್ರೇಡ್-1.<br>ರೂ. 83700-155200 | 310 | 20 | 05 | ತಹಸೀಲ್ದಾರ್ ಗ್ರೇಡ್-2ರ ವೃಂದದಿಂದ ಜೇಷ್ಠತೆಯ ಆಧಾರದ ಮೇಲೆ ಮುಂಬಡ್ತಿ | ತಹಸೀಲ್ದಾರ್ ಗ್ರೇಡ್-2 ವೃಂದದಲ್ಲಿ ಕನಿಷ್ಠ 3 ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು. |
| 17 | ಲೆಕ್ಕಾದಿಕಾರಿ.<br>ರೂ. 83700-155200 | 03 | - | - | ಕರ್ನಾಟಕ ರಾಜ್ಯ ಖಜಾನೆ ಇಲಾಖೆಯಿಂದ ನಿಯೋಜನೆ. | - |
| 18. | ತಹಸೀಲ್ದಾರ್ ಗ್ರೇಡ್-2<br>ರೂ. 69250-134200 | 370 | 113 | - | **ನೇರ ನೇಮಕಾತಿ ಮೂಲಕ:**<br>ಕರ್ನಾಟಕ ಗೆಜೆಷಟ್ ಪ್ರೊಬೆಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997 ರನ್ವಯ ಶೇಕಡ ಐವತ್ತರಷ್ಟು (50%) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇರ ನೇಮಕಾತಿ<br><br>**ಮುಂಬಡ್ತಿ ಮೂಲಕ**:<br>ರಾಜ್ಯಮಟ್ಟದ ಸಂಯೋಜಿತ ಶಿರಸ್ತೇದಾರ್ ಅಥವಾ ಉಪತಹಶೀಲ್ದಾರ್ ವೃಂದದ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಶೇಕಡ ಐವತ್ತರಷ್ಟು (50%) ಮುಂಬಡ್ತಿ. | **ನೇರ ನೇಮಕಾತಿಗಾಗಿ:** ಕರ್ನಾಟಕ ಗೆಜೆಷಟ್ ಪ್ರೊಬೆಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ಅನುಸಾರ.<br><br>**ಬಡ್ತಿಗಾಗಿ**: ಶಿರಸ್ತೇದಾರ್/ ಉಪತಹಶೀಲ್ದಾರ್ ವೃಂದಗಳಲ್ಲಿ ಕನಿಷ್ಠ 5 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಬೇಕು<br><br>ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಯು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಗಳನ್ನು ಪರಿಗಣಿಸತಕ್ಕದ್ದು. |

| | | | | | | |
|---|---|---|---|---|---|---|
| 19. | ಲೆಕ್ಕಾಧಿಕಾರಿ ಗ್ರೇಡ್-2/ಆಯವ್ಯಯ ಅಧಿಕಾರಿ<br>ರೂ. 69250-134200 | 05 | - | - | ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆಯಿಂದ ನಿಯೋಜನೆ. | - |
| 20. | ಸಾಂಖ್ಯಿಕ ಅಧಿಕಾರಿ ಗ್ರೇಡ್-2<br>ರೂ. 61300-112900 | 01 | - | - | ಕರ್ನಾಟಕ ರಾಜ್ಯ ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯಿಂದ ನಿಯೋಜನೆ. | - |
| 21. | ಶಿರಸ್ತೇದಾರ್ / ಉಪತಹಸೀಲ್ದಾರ್/<br>ಕಂದಾಯ ಲೆಕ್ಕ ಪರಿಶೋಧಕರು<br>ರೂ. 61300-112900 | 1585 | - | - | ಪ್ರಥಮ ದರ್ಜೆ ಸಹಾಯಕರು/ ರಾಜಸ್ವ ನಿರೀಕ್ಷಕರು ಮತ್ತು ಶೀಘ್ರಲಿಪಿಗಾರರ ವೃಂದದಿಂದ 19:1 ಅನುಪಾತದಲ್ಲಿ ಮುಂಬಡ್ತಿ. ಪ್ರತಿ 20ನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದ ಹುದ್ದೆಯಿಂದ ಮುಂಬಡ್ತಿ ಮೂಲಕ ಭರ್ತಿ ಮಾಡುವುದು. | ಪ್ರಥಮ ದರ್ಜೆ ಸಹಾಯಕರು/ ರಾಜಸ್ವ ನಿರೀಕ್ಷಕರು ಅಥವಾ ಶೀಘ್ರಲಿಪಿಗಾರರ ವೃಂದಗಳಲ್ಲಿ ಕನಿಷ್ಠ 5 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಬೇಕು.<br><br>ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಯು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಗಳನ್ನು ಪರಿಗಣಿಸತಕ್ಕದ್ದು. |
| 22. | ಲೆಕ್ಕಾಧೀಕ್ಷಕರು. | 01 | - | | ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆಯಿಂದ ನಿಯೋಜನೆ. | - |
| 23. | ಸಾಂಖ್ಯಿಕ ಸಹಾಯಕ. | 01 | - | - | ಕರ್ನಾಟಕ ರಾಜ್ಯ ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯಿಂದ ನಿಯೋಜನೆ. | - |
| 24. | ಭೂಮಾಪನ ಪರ್ಯಾವೇಕ್ಷಕರು.<br>ರೂ. 54175-99400 | 01 | - | - | ಕರ್ನಾಟಕ ಭೂ ದಾಖಲೆ ಮತ್ತು ಭೂಮಾಪನ ಇಲಾಖೆಯಿಂದ ನಿಯೋಜನೆ. | - |
| | | 2881 | - | | **ನೇರ ನೇಮಕಾತಿಮೂಲಕ:**<br>ಕರ್ನಾಟಕ ನಾಗರಿಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರನ್ವಯ ಶೇಕಡಾ ಮೂವತ್ತರಷ್ಟು (30%) ನೇರ ನೇಮಕಾತಿ. | **ನೇರ ನೇಮಕಾತಿಗಾಗಿ:**.<br>ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು. |

| | | | | | | |
|---|---|---|---|---|---|---|
| 25. | ಪ್ರಥಮ ದರ್ಜೆ ಸಹಾಯಕರು/<br>ಕಂದಾಯ ನಿರೀಕ್ಷಕರು.<br>ರೂ. 44425-83700<br>(ಜಿಲ್ಲಾ ಮಟ್ಟದ ಜೇಷ್ಟತಾ ವೃಂದ) | | | | **ಮುಂಬಡ್ತಿ ಮೂಲಕ:**<br>ದ್ವಿತೀಯ ದರ್ಜೆ ಸಹಾಯಕರು ಮತ್ತು ಗ್ರಾಮ<br>ಆಡಳಿತ ಅಧಿಕಾರಿ ವೃಂದಗಳ ಸಂಯೋಜಿತ<br>ಜೇಷ್ಠತೆಯ ಮೂಲಕ ಶೇಕಡಾ ಎಪ್ಪತ್ತರಷ್ಟು (70%) ಮುಂಬಡ್ತಿ. ಆಯಾ ವೃಂದಗಳಲ್ಲಿ ಸಲ್ಲಿಸಿರುವ<br>ಸೇವಾ ಅವಧಿಯನ್ನು ಆಧರಿಸಿ ಜೇಷ್ಠತೆಯನ್ನು<br>ನಿರ್ಧರಿಸಲಾಗುತ್ತದೆ. ಪ್ರತಿ ವೃಂದದಲ್ಲಿ<br>ಜೇಷ್ಠತೆಯನ್ನು ಕಾಯ್ದುಕೊಳ್ಳಬೇಕು. | **ಬಡ್ತಿಗಾಗಿ:**<br>ದ್ವಿತೀಯ ದರ್ಜೆ ಸಹಾಯಕರು ಅಥವಾ ಗ್ರಾಮ ಆಡಳಿತ ಅಧಿಕಾರಿ ವೃಂದಗಳಲ್ಲಿ ಕನಿಷ್ಠ 5 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು<br>ಸಲ್ಲಿಸಿರಬೇಕು.<br>ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಯು<br>ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಗಳನ್ನು ಪರಿಗಣಿಸತಕ್ಕದ್ದು. |
| 26. | ಶೀಘ್ರಲಿಪಿಗಾರರು.<br>ರೂ. 44425-83700 | 142 | - | - | **ನೇರ ನೇಮಕಾತಿ ಮೂಲಕ:**<br>ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ<br>(ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು<br>ಸಹಾಯಕರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983ರ ಪ್ರಕಾರ<br>ಶೇಕಡಾ ಅರವತ್ತಾರರಷ್ಟು (66%) ನೇರ ನೇಮಕಾತಿ ಮೂಲಕ.<br>**ಮುಂಬಡ್ತಿ ಮೂಲಕ:**<br>ಶೇಕಡಾ ಮೂವತ್ತನಾಲ್ಕರಷ್ಟು (34%)<br>ಹುದ್ದೆಗಳನ್ನು ದತ್ತಾಂಶ ನಮೂದು ಸಹಾಯಕರ ವೃಂದದಿಂದ ಜೇಷ್ಟತೆಯ ಆಧಾರದ ಮೇಲೆ<br>ಮುಂಬಡ್ತಿ ಮೂಲಕ. | **ನೇರ ನೇಮಕಾತಿಗಾಗಿ:-**<br>ಎ) ಪದವಿ ಪೂರ್ವ ಅಥವಾ ತತ್ಸಮಾನ ವಿದ್ಯಾರ್ಹತೆಯ ಜೊತೆಗೆ<br>ಬಿ) KSEEB ಯು ನಡೆಸುವ ಕನ್ನಡ ಹಿರಿಯ ಬೆರಳಚ್ಚು ಮತ್ತು ಕನ್ನಡ ಹಿರಿಯ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ<br>ಸಿ) ಕನ್ನಡ ಬೆರಳಚ್ಚು ಮತ್ತು ಕನ್ನಡ ಶೀಘ್ರಲಿಪಿಯಲ್ಲಿ ಕಮರ್ಷಿಯಲ್ ಪ್ರ್ಯಾಕ್ಟೀಸ್ ಡಿಪ್ಲೋಮಾ ಅಥವಾ<br>ತತ್ಸಮಾನ ವಿದ್ಯಾರ್ಹತೆಯನ್ನು<br>ಪಡೆದಿರತಕ್ಕದ್ದು.<br>**ಬಡ್ತಿಗಾಗಿ:** |

| | | | | | | |
|---|---|---|---|---|---|---|
| | | | | | | ಎ) KSEEB ಯು ನಡೆಸುವ ಕನ್ನಡ ಹಿರಿಯ ಬೆರಳಚ್ಚು ಮತ್ತು ಕನ್ನಡ<br>ಹಿರಿಯ ಶೀಘ್ರಲಿಪಿ ಪರೀಕ್ಷೆಯಲ್ಲಿ<br>ಉತ್ತೀರ್ಣರಾಗಿರಬೇಕು ಅಥವಾ<br><br>ಸಿ) ಕನ್ನಡ ಬೆರಳಚ್ಚು ಮತ್ತು ಕನ್ನಡ ಶೀಘ್ರಲಿಪಿಯಲ್ಲಿ ಕಮರ್ಷಿಯಲ್ ಪ್ರ್ಯಾಕ್ಟೀಸ್ ಡಿಪ್ಲೋಮಾ ಅಥವಾ<br>ತತ್ಸಮಾನ ವಿದಾ ರ್ಹತೆಯನ್ನು<br>ಪಡೆದಿರತಕ್ಕದ್ದು.<br><br>ಸಿ) ದತ್ತಾಂಶ ನಮೂದು ಸಹಾಯಕ ವೃಂದದಲ್ಲಿ ಕನಿಷ್ಠ 5 ವರ್ಷಗಳಿಗಿಂತ<br>ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಬೇಕು<br><br>ಕನಿಷ್ಠ 5 ವರ್ಷಗಳ ಸೇವೆಯನ್ನು<br>ಪೂರೈಸಿರುವ ಸಿಬ್ಬಂದಿಯು<br>ಲಭ್ಯವಿಲ್ಯದಿದ್ದಲ್ಲಿ ಮೂರು ವರ್ಷಗಳ<br>ಸೇವೆಯನ್ನು ಪೂರೈಸಿರುವ ಸಿಬ್ಬಂದಿ<br>ಗಳನ್ನು ಪರಿಗಣಿಸತಕ್ಕದ್ದು. |
| 27 | ಭೂಮಾಪಕರು.<br>ರೂ. 37500-76100 | 04 | - | - | ಕರ್ನಾಟಕ ಭೂ ದಾಖಲೆಗಳು ಮತ್ತು ಭೂಮಾಪನ ಇಲಾಖೆಯಿಂದ ನಿಯೋಜನೆ. | - |
| 28. | ದ್ವಿತೀಯ ದರ್ಜೆ ಸಹಾಯಕರು.<br>ರೂ. 34100-67600<br>(ಜಿಲ್ಲಾ ಮಟ್ಟದ ಜೇಷ್ಟತಾ ವೃಂದ) | 3037 | - | - | **ನೇರ ನೇಮಕಾತಿ ಮೂಲಕ:**<br>ಕರ್ನಾಟಕ ನಾಗರಿಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರನ್ವಯ ಶೇಕಡಾ ಎಪ್ಪತ್ತೈದರಷ್ಟು (75%) ರಷ್ಟು ನೇರ ನೇಮಕಾತಿ. | **ನೇರ ನೇಮಕಾತಿಗಾಗಿ:**<br>ಪದವಿ ಪೂರ್ವ ಪರೀಕ್ಷೆ [PUC]<br>ಅಥವಾ ತತ್ಸಮಾನ ಪರೀಕ್ಷೆಯಲ್ಲಿ<br>ಉತ್ತೀರ್ಣರಾಗಿರಬೇಕು. |

| | | | | | | |
|---|---|---|---|---|---|---|
| | | | | | **ಬಡ್ತಿಯ ಮೂಲಕ:**<br>ಶೇಕಡಾ ಇಪ್ಪತ್ತೈದರಷ್ಟು (25%) ಗ್ರೂಪ್ “ಡಿ” ಸೇವೆಯಲ್ಲಿರುವ ಯಾವುದೇ ವೃಂದದಿಂದ ಮುಂಬಡ್ತಿ. ಆಯಾ ವೃಂದಗಳಲ್ಲಿ ಸಲ್ಲಿಸಿರುವ ಸೇವಾ ಅವಧಿಯನ್ನು ಆಧರಿಸಿ ಜೇಷ್ಠತೆಯನ್ನು ನಿರ್ಧರಿಸಲಾಗುತ್ತದೆ.<br>. | **ಮುಂಬಡ್ತಿಗಾಗಿ:**<br>1. ಪದವಿ ಪೂರ್ವ ಪರೀಕ್ಷೆ [PUC] ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪರಂತು ಕರ್ನಾಟಕ ನಾಗರಿಕ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ (ತಿದ್ದುಪಡಿ) ನಿಯಮಗಳು 2013 ಜಾರಿಗೆ ಬರುವ ಮೊದಲು SSLC ವಿದ್ಯಾರ್ಹತೆಯ ಮೇಲೆ ನೇಮಕಗೊಂಡು ಸೇವೆಯಲ್ಲಿರುವ ನೌಕರರಿಗೆ ಪದವಿ ಪೂರ್ವ ವಿದ್ಯಾರ್ಹತೆಯು ಅನ್ವಯಿಸುವುದಿಲ್ಲ.<br>**2.** ಗ್ರೂಪ್ ಡಿ ವೃಂದಗಳಲ್ಲಿ ಕನಿಷ್ಠ 5 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಬೇಕು.<br>ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಯು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಗಳನ್ನು ಪರಿಗಣಿಸತಕ್ಕದ್ದು. |
| 29 | ಗ್ರಾಮ ಆಡಳಿತ ಅಧಿಕಾರಿ.<br>ರೂ. 34100-67600<br>(ಜಿಲ್ಲಾ ಮಟ್ಟದ ಜೇಷ್ಟತಾ ವೃಂದ) | 9843 | - | - | **ನೇರ ನೇಮಕಾತಿ ಮೂಲಕ**:<br>ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಕರ್ನಾಟಕ ಲೋಕಸೇವಾ ಆಯೋಗ ಅಥವಾ ಕೇಂದ್ರ ಸರ್ಕಾರಿ ಸ್ವಾಮ್ಯದ ಯಾವುದೇ ರಾಷ್ಟ್ರೀಯ ಅಥವಾ ರಾಜ್ಯ ಮಟ್ಟದ ಸಂಸ್ಥೆಯು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಅರ್ಹತೆಯ ಆಧಾರದ ಮೇಲೆ, ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ಪ್ರಕಾರ.<br>**ತರಬೇತಿ:** ಪ್ರತಿ ಗ್ರಾಮ ಆಡಳಿತ ಅಧಿಕಾರಿಯ ನೇಮಕಾತಿಯ ನಂತರ, ಪ್ರೊಬೇಷನ್ ಅವಧಿಯಲ್ಲಿ ತರಬೇತಿಯನ್ನು ಪಡೆಯುವುದು ಅವಶ್ಯಕವಾಗಿದೆ, ಆರು ತಿಂಗಳಿಗೆ ಮೀರದ ಅವಧಿಯ ತರಬೇತಿ ಮತ್ತು ಒಂದು | **ನೇರ ನೇಮಕಾತಿಗಾಗಿ:**<br>ಪದವಿ ಪೂರ್ವ ಪರೀಕ್ಷೆ [PUC] ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |

| | | | | | | |
|---|---|---|---|---|---|---|
| | | | | | ವರ್ಷದೊಳಗೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. | |
| 30. | ದತ್ತಾಂಶ ನಮೂದು ಸಹಾಯಕರು.<br>ರೂ. 34100-67600<br>(ಜಿಲ್ಲಾ ಮಟ್ಟದ ಜೇಷ್ಠತಾ ವೃಂದ) | 753 | - | - | **ನೇರ ನೇಮಕಾತಿ ಮೂಲಕ:**<br>ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು 1983 ರನ್ವಯ ನೇರನೇಮಕಾತಿ. | **ನೇರ ನೇಮಕಾತಿಗಾಗಿ:-**<br>(ಅ) ಪದವಿ ಪೂರ್ವ ಪರೀಕ್ಷೆ [PUC] ಅಥವಾ ತತ್ಸಮಾನ ವಿದ್ಯಾರ್ಹತೆಯ ಜೊತೆಗೆ<br>ಬಿ) KSEEB ಯು ನಡೆಸುವ ಕನ್ನಡ ಹಿರಿಯ ಬೆರಳಚ್ಚುಗಾರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ<br>(ಸಿ) ಕನ್ನಡ ಬೆರಳಚ್ಚಿನೊಂದಿಗೆ<br>ಕಮರ್ಷಿಯಲ್ ಪ್ರ್ಯಾಕ್ಟೀಸ್‌ನಲ್ಲಿ ಡಿಪ್ಲೋಮಾ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. |
| 31 | ವಾಹನ ಚಾಲಕರು.<br>ರೂ. 34100-67600<br>(ಜಿಲ್ಲಾ ಮಟ್ಟದ ಜೇಷ್ಠತಾ ವೃಂದ) | 407 | - | - | **ನೇರ ನೇಮಕಾತಿ ಮೂಲಕ**:<br>ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರನ್ವಯ ಶೇಕಡಾ ಎಪ್ಪತ್ತೈದರಷ್ಟು (75%) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ.<br>**ಮುಂಬಡ್ತಿ ಮೂಲಕ**:<br>ಗ್ರೂಪ್ "ಡಿ" ಸೇವೆಯಲ್ಲಿರುವ ಯಾವುದೇ ವೃಂದದ ಸಂಯೋಜಿತ ಜೇಷ್ಠತೆಯನ್ವಯ ಶೇಕಡಾ ಇಪ್ಪತ್ತೈದರಷ್ಟು (25%) ಹುದ್ದೆಗಳನ್ನು ಮುಂಬಡ್ತಿ ಮೂಲಕ. ಆಯಾ ವೃಂದಗಳಲ್ಲಿ ಸಲ್ಲಿಸಿರುವ ಸೇವಾ ಅವಧಿಯನ್ನು ಆಧರಿಸಿ ಜೇಷ್ಠತೆಯನ್ನು ನಿರ್ಧರಿಸಲಾಗುತ್ತದೆ. | **ನೇರ ನೇಮಕಾತಿಗಾಗಿ:-**<br>1. 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಚಾಲ್ತಿಯಲ್ಲಿರುವ ಮೋಟಾರ್ ವಾಹನದ ಚಾಲನಾ ಪರವಾನಗಿಯನ್ನು ಹೊಂದಿರಬೇಕು ಮತ್ತು ಆಯ್ಕೆ ಪ್ರಾಧಿಕಾರದಿಂದ ಆಯ್ಕೆ ಹೊಂದಿದ ತಕ್ಷಣ<br>ಅಭ್ಯರ್ಥಿಯು ಪೊಲೀಸ್ ಚಾಲನಾ ಮತ್ತು ನಿರ್ವಹಣಾ ಶಾಲೆಯು ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.<br>**ಮುಂಬಡ್ತಿಗಾಗಿ:**<br>i. ಚಾಲ್ತಿಯಲ್ಲಿರುವ ಮೋಟಾರು ವಾಹನ ಚಾಲನಾ ಪರವಾನಗಿಯನ್ನು ಹೊಂದಿರಬೇಕು. |

| | | | | | | |
|---|---|---|---|---|---|---|
| | | | | | | ii. ಚಾಲಕರಾಗಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಅನುಭವವನ್ನು ಹೊಂದಿರಬೇಕು.<br>iii. ಯಾವುದೇ ಗ್ರೂಪ್ ಡಿ ವೃಂದದಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರಬೇಕು. |
| 32 | ಧಫ್ತರ್‌ಬಂದ್/ಅಟೆಂಡರ್ಸ್.<br>ರೂ. 29600-52800<br>(ಜಿಲ್ಲಾ ಮಟ್ಟದ ಜೇಷ್ಟತಾ ವೃಂದ) | **276** | - | - | **ನೇರ ನೇಮಕಾತಿ ಮೂಲಕ**:<br>ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ರನ್ವಯ ಶೇಕಡಾ ಎಪ್ಪತ್ತೈದರಷ್ಟು (75**%)** ನೇರನೇಮಕಾತಿ.<br>**ಮುಂಬಡ್ತಿ ಮೂಲಕ** :<br>ಗ್ರೂಪ್ ಡಿ ವೃಂದದಿಂದ ಶೇಕಡಾ ಇಪ್ಪತ್ತೈದರಷ್ಟು (25%) ರಷ್ಟು ಮುಂಬಡ್ತಿ ಮೂಲಕ. | **ನೇರ ನೇಮಕಾತಿಗಾಗಿ:**<br>ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು<br>**ಮುಂಬಡ್ತಿಗಾಗಿ:**<br>1. ಎಸ್.ಎಸ್.ಎಲ್.ಸಿ. .ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>2. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಯಾವುದೇ ಒಂದು ಅಥವಾ ಹೆಚ್ಚಿನ ವೃಂದಗಳಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು. |
| 33. | ಜಮೇದಾರ್/ದಫೇದಾರ್.<br>ರೂ. 29600-52800<br>(ಜಿಲ್ಲಾ ಮಟ್ಟದ ಜೇಷ್ಟತಾ ವೃಂದ) | **270** | - | - | ಗ್ರೂಪ್ "ಡಿ" ವೃಂದದ ಸಂಯೋಜಿತ ಜೇಷ್ಠತೆಯನ್ನಯ ಮುಂಬಡ್ತಿ ಮೂಲಕ. ಆಯಾ ವೃಂದಗಳಲ್ಲಿ ಸಲ್ಲಿಸಿರುವ ಸೇವಾ ಅವಧಿಯನ್ನು ಆಧರಿಸಿ ಜೇಷ್ಠತೆಯನ್ನು ನಿರ್ಧರಿಸುವುದು. | **ಮುಂಬಡ್ತಿಗಾಗಿ:**<br>1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>2. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಯಾವುದೇ ಒಂದು ಅಥವಾ ಹೆಚ್ಚಿನ ವೃಂದಗಳಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | | | |
|---|---|---|---|---|---|---|
| 34. | ಗ್ರೂಪ್ "ಡಿ" .<br>(ಜವಾನರು/ವಾಚ್‌ಮನ್)<br>ರೂ. 27000-46675 | 2618 | - | - | **ನೇರ ನೇಮಕಾತಿ ಮೂಲಕ**:<br>ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರನ್ವಯ ನೇರ ನೇಮಕಾತಿ. | **ನೇರ ನೇಮಕಾತಿಗಾಗಿ:**<br>ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| | **ಒಟ್ಟು** | **22655** | **133** | **05** | | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH